ಮೂಲ ದಾವಾ ಃ 124-2011 ಡಿಡಬ್ಲ್ಯು-1

ಸಾಕ್ಷಿಯನ್ನು ದಿನಾಂಕಃ 01.03.2019 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

21. ಪಾಟಿ ಸವಾಲು ಃ ವಾದಿ ಪರ ಶ್ರೀ ಎನ್ ಎಸ್ ಯು ವಕೀಲರಿಂದ

ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ಶಾಯಿರಾ ಬಾನುರವರು ಈ ದಾವೆ ಹಾಕಿದ್ದಾರೆ, ಅವರ ಪೂರ್ಣ ಹೆಸರು ನನಗೆ ಗೊತ್ತಿಲ್ಲ. ಅವರ ಅಣ್ಣ-ತಮ್ಮಂದಿರು ಮತ್ತು ಅಕ್ಕ-ತಂಗಿಯರು ಎಷ್ಟು ಮಂದಿ ಇದ್ದಾರೆ ಗೊತ್ತಿಲ್ಲ. ಅವರು ಏನು ಅಂತ ಕೇಸು ಮಾಡಿದ್ದಾರೆ ಅಂತ ಗೊತ್ತು. ಹೊಲದ ಮೇಲೆ ಕೇಸು ಮಾಡಿದ್ದಾರೆ ಅಂತ ಮಾತ್ರ ಗೊತ್ತು ಆದರೆ ಏನು ಕೇಸು ಮಾಡಿದ್ದಾರೆ ಅಂತ ಗೊತ್ತಿಲ್ಲ. ದಾವೆಯಲ್ಲಿ ತಕರಾರು ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ತಕರಾರಿನಲ್ಲಿ ಬರೆದ ವಿಚಾರಗಳನ್ನು ನನಗೆ ಓದಿ ತಿಳಿಸಿದ್ದಾರೆ. ನಾನು ಅದರಲ್ಲಿರುವ ವಿಚಾರವನ್ನು ತಿಳಿದುಕೊಂಡಿದ್ದೇನೆ. ಸರ್ವೆ ನಂ 268/ಎ ರಲ್ಲಿ 3 ಎಕರೆ 24 ಗುಂಟೆ ಜಮೀನಿಗೆ ದಾವೆ ಹಾಕಿದ್ದಾರೆ. ಸರ್ವೆ ನಂ 268/ಎ ರಲ್ಲಿ 3 ಎಕರೆ 24 ಗುಂಟೆ ಜಮೀನಿಗೆ ದಾವೆ ಹಾಕಿದ್ದಾರೆ ಅಂತ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ವಾದಾ ಪತ್ರವನ್ನು ಓದಿಸಿ ತಿಳಿದುಕೊಂಡಿದ್ದೇನೆ. ಸರ್ವೆ ನಂ 268/ಎ1 ರಲ್ಲಿ 1 ಎಕರೆ ಜಮೀನಿಗೆ ದಾವೆ ಹಾಕಿದ್ದಾರೆ ಅಂದರೆ ಸರಿಯಲ್ಲ. ನಾನು ಶೇತ್ಕಿ

ಮಾಡುತ್ತೇನೆ. ನಾನು ವ್ಯಾಪಾರ ಮಾಡುವುದಿಲ್ಲ. ನನಗೆ ಒಟ್ಟು ಸರ್ವೆ ನಂ 267 ರಲ್ಲಿ 2 ಎಕರೆ 38 ಗುಂಟೆ ಹಾಗೂ ಇನ್ನೊಂದು ಸರ್ವೆ ನಂಬರ್ ಜಮೀನಿನಲ್ಲಿ 3 ಎಕರೆ 24 ಗುಂಟೆ ಇದೆ. ಇವುಗಳನ್ನು ಬಿಟ್ಟು 72/1 ರಲ್ಲಿ 2 ಎಕರೆ 17 ಗುಂಟೆ ಜಮೀನು ಇದೆ. ದಾವಾ ಆಸ್ತಿಯ ಚೆಕ್ಕುಬಂಧಿ ಗೊತ್ತಿಲ್ಲ.

22. ನನ್ನ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಪ್ಯಾರಾ ನಂ 11 ರಲ್ಲಿ ಶಾಯಿರಾಬಾನುರವರ ಅಕ್ಕ-ತಂಗಿಯರ ಬಗ್ಗೆ ನಾನು ಮಾಹಿತಿ ತಿಳಿದು ಬರೆಸಿದ್ದೇನೆ. ವಾದಿಯ ಹೆಸರು ಶಾಯಿರಾಬಾನು ಕೋಂ ಅಬ್ದುಲ್‌ಗಾಫರ್ ಸವಣೂರು ಅಂತ ಬರೆಸಿದ್ದೇನೆ. ಆದರೆ ಈಗ ಅವರ ಗಂಡನ ಹೆಸರು ಹೇಳಲು ಬರುವುದಿಲ್ಲ. ಸದರಿ ಖಂಡಿಕೆಯಲ್ಲಿ ಶಬ್ಬೀರ್ ತಂದೆ ಇಬ್ರಾಹಿಂಸಾಬ್ ದಾಲಲ್ ಅಂತ ಬರೆಸಿದ್ದು, ಅವರು ಈಗ ಇಲ್ಲ. ಗೌಸ್‌ಬಿ ಹಾಗೂ ಮೊಹಬೂಬ್ ರವರ ಬಗ್ಗೆ ಗೊತ್ತಿಲ್ಲ. ಶಾಯಿರಾಬಾನ್ ಗಂಡನ ಹೆಸರು ನಜೀರ್‌ಮ್ಮದ್ ನೇಸರಗಿ ಅಂತ ಇದೆ ಅಂದರೆ ಗೊತ್ತಿಲ್ಲ. ವಾದಿಯ ಹೆಸರನ್ನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ತಪ್ಪಾಗಿ ನಮೂದಿಸಿದ್ದೇನೆ ಅಂದರೆ ಗೊತ್ತಿಲ್ಲ. ವಾದಿಗೆ ತಾಯಿರೇ ಬೇಗಂ ಕೋ ಅಬ್ದುಲ್‌ಗಾಫರ್ ಸವಣೂರು ಅಂತ ಅಕ್ಕ ಇದ್ದಾರೆ ಅಂದರೆ ಗೊತ್ತಿಲ್ಲ. ವಾದಿ ಮತ್ತು ಅವರ ಅಕ್ಕ-ತಂಗಿಯರ ನಡುವೆ ಯಾವುದೇ ತಂಟೆ ತಕರಾರು ಇಲ್ಲ ಅಂದರೆ ಗೊತ್ತಿಲ್ಲ. ವಾದಿಯ ಅಕ್ಕ-ತಂಗಿಯರು ಈಗ ನ್ಯಾಯಾಲಯದಲ್ಲಿ ಇದ್ದಾರೆ ಅಂದರೆ ಸರಿ. ಅವರಿಗೆ ತಂಟೆ ಇದ್ದರೆ ಈ ದಾವೆಯಲ್ಲಿ ತಕರಾರು ಸಲ್ಲಿಸುತ್ತಿದ್ದರು ಅಂದರೆ ಗೊತ್ತಿಲ್ಲ. ಅವರುಗಳ ನಡುವೆ ತಂಟೆ ಇಲ್ಲ ಅಂತ ಗೊತ್ತಿದ್ದರೂ ಈಗ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. 3 ಎಕರೆ 24 ಗುಂಟೆ ಜಮೀನು ಫಕ್ರುಸಾಬ್‌ರವರಿಗೆ ಸೇರಿದ ಜಮೀನು ಅಂದರೆ ಸರಿಯಲ್ಲ. ಸದರಿ ಜಮೀನಿನ ಉತಾರ ನೋಡಿದ್ದೇನೆ. ಯಾವ ವರ್ಷದ ಉತಾರ ನೋಡಿದ್ದೇನೆ ಅಂತ ನೆನಪಿಲ್ಲ, ಆದರೆ ನನ್ನ ಅಜ್ಜರವರು ಇದ್ದ ಉತಾರವನ್ನು ನೋಡಿದ್ದೇನೆ.

ಮುಂದುವರೆದ ಪಾಟಿ ಸವಾಲಿಗೆ ಸಮಯ ಕೇಳಲಾಗಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,
ಸಹಿ/-
ದಿವಾಣಿ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ